# ‘ಆಕಾರ ನೋಡಿ ಅಳೆಯಬೇಡಿ’

## ವಿಶ್ವದ ಎತ್ತರದ ಮಹಿಳೆ ರುಮೇಸಾ ಗೆಲ್ಗಿ ಛಲದ ಬದುಕು

ರುಮೇಸಾ ಗೆಲ್ಗಿ ವಿಶ್ವದ ಅತಿ ಎತ್ತರದ ಮಹಿಳೆ ಮಾತ್ರವಲ್ಲ, ಬದುಕಿಗೆ ಎದುರಾದ ಎಡರುತೊಡರುಗಳನ್ನು ಮೆಟ್ಟಿನಿಂತು ತಮ್ಮ ಜೀವನವನ್ನೂ ಬಲು ಎತ್ತರಕ್ಕೆ ಕೊಂಡೊಯ್ದವರು.

■ ಪೃಥ್ವಿರಾಜ್

ವಿಶ್ವದಾದ್ಯಂತ ಕೇವಲ 50 ಜನರಿಗೆ ಕಾಡುತ್ತಿರುವ ಅಪರೂಪದ ರೋಗ ‘ವೀವರ್ಸ್ ಸಿಂಡ್ರೋಮ್’. ಈ ಕಾಯಿಲೆ ರುಮೇಸಾ ಅವರಿಗೆ ನಾಲ್ಕನೇ ವಯಸ್ಸಿನಲ್ಲಿಯೇ ಆವರಿಸಿಬಿಟ್ಟಿತು.

ಆರನೇ ವಯಸ್ಸಿಗೆ ಬರುವ ಹೊತ್ತಿಗೆ ಇವರ ಎತ್ತರ 5 ಅಡಿ 8 ಅಂಗುಲವಿತ್ತು. ಇದರಿಂದ, ದೊಡ್ಡವರ ದೇಹದಲ್ಲಿ ಮಗುವಿನ ರೂಪ ಅಳವಡಿಸಿದಂತೆ ಕಾಣಿಸುತ್ತಿದ್ದರು ರುಮೇಸಾ. ಆದರೆ ಈ ರೋಗವೇ ಈಕೆಯನ್ನು ವಿಶ್ವವೇ ಕತ್ತೆತ್ತಿ ನೋಡುವಂತೆ ಮಾಡಿದೆ.

ಟರ್ಕಿಯ ಸರ್ಫನ್‌ಬೋಲುನಲ್ಲಿ ಜನಿಸಿದ ರುಮೇಸಾ ಗೆಲ್ಗಿಗೆ ಈಗ 26 ವರ್ಷ. ಪ್ರಸ್ತುತ ಇವರ ಎತ್ತರ 7 ಅಡಿ 7 ಇಂಚು!

ವಿಶ್ವದ ಅತಿ ಎತ್ತರದ ಮಹಿಳೆ ರುಮೇಸಾ. ಎತ್ತರವಷ್ಟೇ ಅಲ್ಲ, ಅತಿ ನೀಳವಾದ ಕೈಗಳು, ನೀಳ ಬೆರಳುಗಳು, ಅತಿ ಉದ್ದದ ಬೆನ್ನುಮೂಳೆ ಇರುವ ಮಹಿಳೆ ಎಂಬ ದಾಖಲೆಯೂ ಸೇರಿ, ಒಟ್ಟು ಐದು ದಾಖಲೆಗಳು ಇವರ ಹೆಸರಿನಲ್ಲಿವೆ. ಆರೋಗ್ಯದ ಸಮಸ್ಯೆ ಕಾಡುತ್ತಿದ್ದರೂ ಓದಿನಲ್ಲಿ, ಉದ್ಯೋಗದಲ್ಲಿ ಸಾಧನೆ ಮಾಡುತ್ತಾ ಎಲ್ಲರ ಹುಬ್ಬೇರಿಸುವಂತೆ ಮಾಡುತ್ತಿದ್ದಾರೆ.




### ಏನಿದು ರೋಗ?

ವೀವರ್ಸ್ ಸಿಂಡ್ರೋಮ್ ರೋಗ ಬಂದರೆ, ಬದುಕು ನಿತ್ಯ ಹೋರಾಟ. ಮುಖ–ಪಾದಗಳು ಅಳತೆಮೀರಿ ಬೆಳೆಯುತ್ತವೆ. ಗಂಟಲು ಕೂಡ ದೊಡ್ಡದಾಗಿ, ಧ್ವನಿ ಒರಟಾಗಿ ಕೇಳಿಸುತ್ತದೆ. ಈ ರೋಗ ಮೆದುಳಿನ ಮೇಲೂ ಪರಿಣಾಮ ಬೀರುತ್ತದೆ. ಹೃದಯದ ಕೆಲಸದಲ್ಲೂ ಲೋಪಗಳಾಗುತ್ತವೆ.

ಎತ್ತರೆತ್ತರ ಬೆಳೆದಂತೆಲ್ಲಾ, ದೇಹ ಒಂದೆಡೆಗೆ ಬಾಗುತ್ತದೆ. ಇದರಿಂದ ನಡಿಗೆಯೂ ಕಷ್ಟವಾಗುತ್ತದೆ. ಈ ಸಮಸ್ಯೆಗಳ ಸರಮಾಲೆಗಳ ಜೊತೆ ಬದುಕುತ್ತಿರುವ ರುಮೇಸಾ ದೇಹದಲ್ಲಿ ವೈದ್ಯರು ಅಗತ್ಯವೆನಿಸಿದ ಕಡೆ ರಾಡ್‌ಗಳು, ಸ್ಕ್ರೂಗಳನ್ನು ಅಳವಡಿಸಿದ್ದಾರೆ.

ದೈಹಿಕ ಸಮಸ್ಯೆಯ ಕಾರಣವಾಗಿಯೇ ರುಮೇಸಾ ಓದು ಮತ್ತು ಬಾಲ್ಯ ಮನೆಗೇ ಸೀಮಿತವಾಗಿಬಿಟ್ಟಿತು. ತನ್ನ ವಯಸ್ಸಿನ ಮಕ್ಕಳು ಹೊರಗೆ ಸ್ವಚ್ಛಂದವಾಗಿ ಆಡುತ್ತಿದ್ದರೆ, ಅದನ್ನು ನೋಡುವುದು ಮಾತ್ರ ರುಮೇಸಾ ಪಾಲಿಗೆ ಒದಗಿಬಂದಿತ್ತು. ಆದರೆ ರುಮೇಸಾ ಬೇಸರಪಟ್ಟುಕೊಳ್ಳಲಿಲ್ಲ. ಜೀವನದ ಮೇಲೆ ಜುಗುಪ್ಸೆ ಬಂದರೂ ಎದೆಗುಂದಲಿಲ್ಲ. ಹಿತವಾದ ಮಾತುಗಳಿಂದಲೇ ಎಲ್ಲರ ಮೆಚ್ಚುಗೆ ಗಳಿಸುವಲ್ಲಿ ಯಶಸ್ವಿಯಾದರು.

### ವಿಮಾನವನ್ನೇ ಮಾರ್ಪಡಿಸಿದರು

ರುಮೇಸಾಗೆ ಲೋಕ ಸುತ್ತುವ ಬಯಕೆ. ಪ್ರಪಂಚದ ಸುಂದರ ಸ್ಥಳಗಳನ್ನು ಕಣ್ತುಂಬಿಕೊಳ್ಳುವ ಮಹದಾಸೆ. ಆದರೆ ಆ ಬಯಕೆ ಈಡೇರಿಸಿಕೊಳ್ಳುವ ದಾರಿಯೇನೂ ಸುಲಭದ್ದಾಗಿರಲಿಲ್ಲ. ರುಮೇಸಾ ಹೆಚ್ಚು ಎತ್ತರವಿರುವುದರಿಂದ ಕಾರಿನಲ್ಲಿ ಪ್ರಯಾಣಿಸಲು ಆಗುವುದಿಲ್ಲ. ಹೀಗಾಗಿ ಪೋಷಕರು ರುಮೇಸಾ ಪ್ರಯಾಣಕ್ಕೆ ತಕ್ಕಂತೆ ವಿಶೇಷ ವ್ಯಾನ್ ತಯಾರಿಸಿದ್ದಾರೆ. ಹೆಚ್ಚು ಹೊತ್ತು ಕುಳಿತರೆ ಸಮಸ್ಯೆಯಾಗಬಹುದೆಂಬ ಕಾರಣಕ್ಕೆ ಮಲಗುವುದಕ್ಕೂ ವ್ಯವಸ್ಥೆ ಮಾಡಿಸಿದ್ದಾರೆ. ಆದರೆ ವಿಮಾನ ಪ್ರಯಾಣವಂತೂ ಕಷ್ಟ.

ರುಮೇಸಾ ಕಷ್ಟಕ್ಕೆ ಸ್ಪಂದಿಸಿದ ‘ಟರ್ಕಿಶ್ ಏರ್’ ಎಂಬ ವಿಮಾನಯಾನ ಸಂಸ್ಥೆ, ಆರು ಆಸನಗಳನ್ನು ಜೋಡಿಸಿ ಸ್ಟ್ರೆಚರ್‌ನಂತೆ ಮಾಡಿ ಪ್ರಯಾಣವನ್ನು ಸುಲಭ ಮಾಡಿದೆ.

ನಿತ್ಯ ಕಷ್ಟಗಳನ್ನು ಎದುರಿಸಬೇಕಾಗಿ ಬಂದರೂ ರುಮೇಸಾ ಓದುವುದನ್ನು ನಿರ್ಲಕ್ಷ್ಯ ಮಾಡಲಿಲ್ಲ. ಓದಿನಿಂದಾಗಿಯೇ ಕ್ಯಾಲಿಫೋರ್ನಿಯಾದ ಕಂಪನಿಯೊಂದರಲ್ಲಿ ವೆಬ್ ಡೆವಲಪರ್ ಕೆಲಸ ಅರಸಿ ಬಂತು. ತಮ್ಮ ದಿನಚರಿ ಹಾಗೂ ಪ್ರವಾಸದ ವಿವರಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಆಗಾಗ್ಗೆ ಪ್ರಕಟಿಸುತ್ತಿರುತ್ತಾರೆ ಅವರು.

‘ಆಕಾರ ನೋಡಿ ಮನುಷ್ಯರನ್ನು ಅಳತೆ ಮಾಡುವ ಗುಣ ಬಿಡಿ’ ಎಂದು ಹೇಳುವ ರುಮೇಸಾ, ನಿತ್ಯ ಹಲವರಿಗೆ ಸ್ಫೂರ್ತಿಯಾಗುವಂತೆ ಬದುಕುತ್ತಿದ್ದಾರೆ. ಬದುಕು ಒಡ್ಡುವ ಸವಾಲುಗಳಿಗೆ ಎದೆಯೊಡ್ಡಿ ನಿಲ್ಲುವ ಕಲೆಯನ್ನು ತಮ್ಮ ಕೃತಿ ಮೂಲಕವೇ ತೋರುತ್ತಿದ್ದಾರೆ.

‘ನೆಗೆಟಿವ್ ಸಂಗತಿಗಳನ್ನು ಪಾಸಿಟಿವ್ ಆಗಿ ಪರಿವರ್ತಿಸಿಕೊಳ್ಳಬಹುದು ಎಂಬುದನ್ನು ನಾನು ನಂಬುತ್ತೇನೆ. ಭಿನ್ನವಾಗಿದ್ದು, ಅದೇ ಕಾರಣಕ್ಕೆ ಕಷ್ಟ ಅನುಭವಿಸುತ್ತಿರುವ ಜನರಿಗೆ ನಾನು ಯಾವಾಗಲೂ ಹೇಳುತ್ತಿರುತ್ತೇನೆ, ನಿಮ್ಮ ಸಾಮರ್ಥ್ಯದ ಅರಿವು ನಿಮಗೆ ಇರಲೇಬೇಕು ಎಂದು. ನೀವು ಅನನ್ಯ ಎಂಬುದನ್ನು ನಂಬಿ ಹಾಗೂ ನಿಮ್ಮ ಆ ಅನನ್ಯತೆಯೇ ನಿಮ್ಮನ್ನು ವಿಶೇಷವಾಗಿಸುತ್ತದೆ’ ಎಂದು ಕಿವಿಮಾತು ಹೇಳುತ್ತಾರೆ. ■